## ನಿಮ್ಮೊಡನೆ

# ಅಸಹಾಯಕ ಅಮ್ಮಂದಿರೂ, ನತದೃಷ್ಟ ಮಕ್ಕಳೂ..

ಎಳೆಯ ಮಕ್ಕಳು ತಮಗೆ ಸಂಬಂಧವೇ ಇಲ್ಲದ ಹಾಗೂ ತಾವು ಮಾಡದ ತಪ್ಪಿಗೆ ದೇಶದ ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಒಡಿಶಾ ಜೈಲುಗಳಲ್ಲಿರುವ 46 ತಾಯಂದಿರ ಪೈಕಿ 36 ಮಂದಿ ವಿಚಾರಣಾಧೀನ ಕೈದಿಗಳು. ಅಪರಾಧ ಸಾಬೀತಾಗದಿದ್ದರೂ ತಾಯಿ– ಮಗು ಜೈಲುಗಳಲ್ಲಿ ಕೊಳೆಯುವಂತಹ ಸ್ಥಿತಿ. ಇದಕ್ಕೆ ನಮ್ಮ ನ್ಯಾಯದಾನ ವ್ಯವಸ್ಥೆಯ ವಿಳಂಬವೂ ಕಾರಣ.

ಜೈಲಿನ ಸರಳನ್ನು ಆಸರೆಯಾಗಿಸಿಕೊಂಡು ಅಂಬೆಗಾಲು ಇಡುವ ಸ್ಥಿತಿ ಯಾವ ಮಗುವಿಗೂ ಬರಬಾರದು. ಅಂತಹ ದುಃಸ್ಥಿತಿಗೆ ಕಾರಣವಾಗುವ ಮತ್ತು ಅದನ್ನು ಕಣ್ಣಾರೆ ನೋಡುವಂಥ ದೌರ್ಭಾಗ್ಯ ಯಾವ ತಾಯಿಗೂ ಒದಗಬಾರದು. ಆದರೆ ನಮ್ಮ ಜೈಲುಗಳಲ್ಲಿ ಇಂತಹ ನತದೃಷ್ಟರನ್ನು ನಾವು ಕಾಣಬಹುದು. ಒಡಿಶಾ ರಾಜ್ಯದಲ್ಲಿ ಇಂತಹ 46 ಮಕ್ಕಳು ತಮ್ಮ ತಾಯಂದಿರೊಂದಿಗೆ ವಿವಿಧ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ ಎಂದು ವರದಿಯಾಗಿದೆ. ಹಾಲುಗೆನ್ನೆಯ ಒಂದು ತಿಂಗಳ ಕೂಸಿನಿಂದ ಆರು ವರ್ಷದವರೆಗಿನ ಬಾಲಕ– ಬಾಲಕಿಯರಿಗೆ ಬಂಧೀಖಾನೆಯೇ ಮನೆ, ಬಾಲವಾಡಿ, ಶಾಲೆ, ಆಟದ ಮೈದಾನ... ಎಲ್ಲವೂ ಆಗಿದೆ.

ಮನಕಲಕುವಂಥ ಈ ವರದಿ ಅದೃಷ್ಟವಶಾತ್ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ಕಣ್ಣಿಗೆ ಬಿದ್ದಿದೆ. ಅದನ್ನು ಆಯೋಗವು ಗಂಭೀರವಾಗಿ ಪರಿಗಣಿಸಿ, ದೇಶದ ಎಲ್ಲ ರಾಜ್ಯ ಸರ್ಕಾರಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ಜಾರಿ ಮಾಡಿರುವುದು ಗಮನಿಸಬೇಕಾದ ಸಂಗತಿ. ದೇಶದಾದ್ಯಂತ ಇರುವ ಜೈಲುಗಳಲ್ಲಿ ಬಂಧಿಯಾಗಿರುವ ಅಮ್ಮಂದಿರೊಂದಿಗೆ ಇರುವ ಮಕ್ಕಳನ್ನು ಗುರುತಿಸುವಂತೆ ಸೂಚಿಸಿದೆ. ಬರೀ ಸೂಚಿಸಿದ ಮಾತ್ರಕ್ಕೆ ಇಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುವುದಿಲ್ಲ ಎಂದು ಅನುಭವದಿಂದ ಕಂಡುಕೊಂಡಿರುವ ಕಾರಣಕ್ಕೋ ಏನೋ, ಗುರುತಿಸುವ ಈ ಕೆಲಸ ಆರು ವಾರಗಳಲ್ಲಿ ಪೂರ್ಣಗೊಳ್ಳಬೇಕು ಎಂದು ಗಡುವು ವಿಧಿಸಿ ತಾಕೀತು ಮಾಡಿರುವುದು ಮೆಚ್ಚುವಂತಹ ನಡೆ.

ಈ ಎಳೆಯ ಮಕ್ಕಳು ತಮಗೆ ಸಂಬಂಧವೇ ಇಲ್ಲದ ಹಾಗೂ ತಾವು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿದ್ದಾರೆ ಎಂದು ಮಕ್ಕಳ ಹಕ್ಕುಗಳ ರಕ್ಷಣೆಗೆ ಹೋರಾಡುತ್ತಿರುವ ಸಂಸ್ಥೆಗಳು ಹೇಳುತ್ತಿರುವುದು ಸರಿಯಾಗಿಯೇ ಇದೆ. ಬಂಧಿಯಾಗಿರುವ ಅಮ್ಮಂದಿರೊಂದಿಗೆ ಇರುವ ಮಕ್ಕಳಿಗೆ ಒದಗಿಸಬೇಕಿರುವ ಕನಿಷ್ಠ ಸೌಲಭ್ಯಗಳ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ಮಾರ್ಗಸೂಚಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ಊಟೋಪಚಾರ, ವಸತಿ, ವೈದ್ಯಕೀಯ ಸೇವೆ, ಮನರಂಜನೆಗೆ ಬೇಕಾದ ಸೌಲಭ್ಯಗಳನ್ನು ಪೂರೈಸಬೇಕು. ಜೈಲಿನ ಆವರಣದ ಹೊರಗೆ ಎಳೆಯ ಮಕ್ಕಳಿಗೆ ಕೂಸುಮನೆ ಹಾಗೂ ಎರಡರಿಂದ ಮೂರು ವರ್ಷದ ಒಳಗಿನ ಮಕ್ಕಳಿಗೆ ಶಿಶುವಿಹಾರದ ಸೌಲಭ್ಯ ಕಲ್ಪಿಸಬೇಕು. ಇವುಗಳನ್ನು ಬಂಧೀಖಾನೆ ಇಲಾಖೆಯೇ ವ್ಯವಸ್ಥೆಗೊಳಿಸಬೇಕು ಎಂದು ಈ ಮಾರ್ಗಸೂಚಿ ಹೇಳುತ್ತದೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಅದರ ಬಗ್ಗೆ ಪ್ರತ್ಯೇಕವಾಗಿ ವಿವರಿಸಬೇಕಾದ ಅಗತ್ಯ ಇಲ್ಲ. ಅಗತ್ಯ ಉಪಚಾರ, ಕನಿಷ್ಠ ಸೌಲಭ್ಯ ಪಡೆಯುವ ಹಕ್ಕನ್ನು ಮಕ್ಕಳಿಗೆ ಸರ್ವೋಚ್ಚ ನ್ಯಾಯಾಲಯದ ಈ ಮಾರ್ಗಸೂಚಿ ಕಲ್ಪಿಸಿದೆ. ಆದರೆ ಈ ಹಕ್ಕುಗಳು ಯಾವುದೇ ಎಗ್ಗಿಲ್ಲದೆ ಉಲ್ಲಂಘನೆ ಆಗುತ್ತಿವೆ ಎಂಬುದು ಎಲ್ಲರೂ ಬಲ್ಲ ಸತ್ಯ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ವಿಚಾರ ಇದೆ. ಒಡಿಶಾ ಜೈಲುಗಳಲ್ಲಿರುವ 46 ತಾಯಂದಿರ ಪೈಕಿ 36 ಮಂದಿ ವಿಚಾರಣಾಧೀನ ಕೈದಿಗಳು. ಅಪರಾಧ ಸಾಬೀತಾಗದಿದ್ದರೂ ಜೈಲುಗಳಲ್ಲಿ ಕೊಳೆಯುವಂತಹ ಸ್ಥಿತಿ. ಇದಕ್ಕೆ ನಮ್ಮ ನ್ಯಾಯದಾನ ವ್ಯವಸ್ಥೆಯ ವಿಳಂಬ ವ್ಯಾಧಿ ಮುಖ್ಯ ಕಾರಣ. ಈ ಅಮ್ಮಂದಿರಲ್ಲಿ ಯಾರಾರದು ಎಂತಹ ಅಸಹಾಯಕ ಸ್ಥಿತಿಯೋ! ಜಾಮೀನು ಪಡೆಯಲು ಬೇಕಾದ 'ಶಕ್ತಿ' ಇಲ್ಲದ ನಿಶ್ಶಕ್ತರು ಎಷ್ಟು ಮಂದಿಯೋ?! ಈ ಮಹಿಳೆಯರು ಜೈಲಿನಲ್ಲಿ ಕೊಳೆಯುವಂತಾಗಲು ನಮ್ಮ ನ್ಯಾಯದಾನ ವ್ಯವಸ್ಥೆಯ ವೈಫಲ್ಯವೂ ಒಂದು ಕಾರಣವಲ್ಲವೇ? ಅದರಿಂದಾಗಿ ಎಳೆಯ ಕಂದಮ್ಮಗಳಿಗೆ ಜೈಲೇ ಮನೆಯಾಗಿರುವುದು, ಉಸಿರುಗಟ್ಟಿಸುವಂಥ ಪರಿಸರದಲ್ಲಿ ಬಾಲ್ಯ ಸವೆಸಬೇಕಾಗಿ ಬಂದಿರುವುದು ಅತ್ಯಂತ ದಾರುಣ ಸಂಗತಿ. ಬಾಲ್ಯಾವಸ್ಥೆಯಲ್ಲಿ ಮಗುವಿನ ಮೇಲೆ ಸುತ್ತಲ ಪರಿಸರ ಬೀರುವ ಪರಿಣಾಮ ದೊಡ್ಡದು ಎಂದು ಅಧ್ಯಯನಗಳು ಹೇಳಿವೆ. ಈ ಕೈದಿಗಳ ವಿಚಾರಣೆಯನ್ನು ಶೀಘ್ರ ಮುಗಿಸಿದರೆ ಇವರಲ್ಲಿಎಷ್ಟೋ ಕೈದಿಗಳು ಆರೋಪ ಸಾಬೀತಾಗದೆ ಬಿಡುಗಡೆ ಆಗಲೂಬಹುದು. ಇನ್ನೆಷ್ಟೋ ಜನರಿಗೆ ಸಿಗುವ ಶಿಕ್ಷೆಯ ಅವಧಿಗಿಂತ ಹೆಚ್ಚು ಕಾಲ ಅವರು ಜೈಲಿನಲ್ಲಿರುವುದೂ ಬೆಳಕಿಗೆ ಬರಬಹುದು. ಈ ಮಧ್ಯೆ ಜೈಲಿನಲ್ಲಿ ಕಳೆವ ದಿನಗಳು ಈ ಮಕ್ಕಳ ಭವಿಷ್ಯದ ಬದುಕಿನ ಮೇಲೆ ಯಾವುದೇ ರೀತಿಯಲ್ಲೂ ನಕಾರಾತ್ಮಕ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕಾದ ಕರ್ತವ್ಯವನ್ನು ಇಲಾಖೆ ಕಟ್ಟುನಿಟ್ಟಾಗಿ ನಿರ್ವಹಿಸಬೇಕು.

■ ಎನ್. ಉದಯಕುಮಾರ್



ಈಶ್ವರ್